# ಕರ್ನಾಟಕ ಸರ್ಕಾರ

ಸಂಖ್ಯೆ: ಕಾಇ 33 ಎಲ್ ಡಬ್ಲ್ಯೂ ಎ 2022

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 28.07.2022

ಅಧಿಸೂಚನೆ

ಕರ್ನಾಟಕ ರಾಜ್ಯದಾದ್ಯಂತ, *"ವಿನೀರ್ ಉದ್ದಿಮೆಗಳಲ್ಲಿ ಉದ್ಯೋಗ"* ಅನುಸೂಚಿತ ಉದ್ದಿಮೆಯಲ್ಲಿ ಯಾವುದೇ ಕೆಲಸದಲ್ಲಿ ತೊಡಗಿರುವ ಕಾರ್ಮಿಕರಿಗೆ ಈ ಕೆಳಕಂಡ "ಕನಿಷ್ಠ ವೇತನ ಕೋಷ್ಟಕದಲ್ಲಿ ನಿರ್ದಿಷ್ಟಪಡಿಸಿರುವಂತೆ ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲು ರಾಜ್ಯ ಸರ್ಕಾರದ ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಪತ್ರದ ಭಾಗ - 4ಎರಲ್ಲಿ 28.03.2022ರಂದು ಪ್ರಕಟಿಸಿ, 1948ರ ಕನಿಷ್ಠ ವೇತನ ಕಾಯ್ದೆಯ (ಕೇಂದ್ರ ಕಾಯ್ದೆ ಸಂಖ್ಯೆ: XI) ರ ಕಲಂ 3(1) (ಬಿ) ಮತ್ತು 5 (1) (ಬಿ) ಖಂಡದ ಮೇರೆಗೆ ಬಾಧಿತರಾಗುವ/ ಸಂಬಂಧವಿರುವ ವ್ಯಕ್ತಿಗಳ ಗಮನಕ್ಕೆ ತರಲಾಗಿದ್ದು, ಅವರಿಂದ ಸಲಹೆ/ ಆಕ್ಷೇಪಣೆಗಳನ್ನು ಸ್ವೀಕರಿಸಲು ಎರಡು ತಿಂಗಳ ಕಾಲಾವಕಾಶವನ್ನು ನೀಡಲಾಗಿತ್ತು. ಸ್ವೀಕೃತಗೊಂಡ ಸಲಹೆ/ ಆಕ್ಷೇಪಣೆಗಳು ಮತ್ತು ಕರಡು ಪ್ರಸ್ತಾವನೆಯನ್ನು ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಮುಂದೆ ಮಂಡಿಸಲಾಗಿತ್ತು.

ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಸಭೆಯಲ್ಲಿ, ಸ್ವೀಕೃತವಾಗಿದ್ದ ಸಲಹೆ / ಆಕ್ಷೇಪಣೆಗಳ ಕುರಿತು ಚರ್ಚಿಸಲಾಗಿರುತ್ತದೆ. ಅದರನ್ವಯ, ಸಭೆಯ ನಡವಳಿಯಲ್ಲಿನ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ರಾಜ್ಯ ಸರ್ಕಾರವು 1948ರ ಕನಿಷ್ಠ ವೇತನ ಕಾಯ್ದೆಯ (ಕೇಂದ್ರ ಕಾಯ್ದೆ ಸಂಖ್ಯೆ: XI) ರ ಕಲಂ 3(1) (ಬಿ) ಮತ್ತು 5 (1) (ಬಿ) ಖಂಡದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮತ್ತು ಈ ಹಿಂದಿನ ಎಲ್ಲಾ ಅಧಿಸೂಚನೆಗಳನ್ನು ರದ್ದುಪಡಿಸಿ, ಕರ್ನಾಟಕ ರಾಜ್ಯಾದ್ಯಂತ *"ವಿನೀರ್ ಉದ್ದಿಮೆಗಳಲ್ಲಿ ಉದ್ಯೋಗ"* ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಈ ಅಧಿಸೂಚನೆ ಹೊರಡಿಸಿದ ದಿನಾಂಕದಿಂದ ಅನ್ವಯವಾಗುವಂತೆ ಕನಿಷ್ಠ ವೇತನವನ್ನು ಈ ಅಧಿಸೂಚನೆಯ ಅನುಸೂಚಿಯಲ್ಲಿ ಇರುವಂತೆ ಪರಿಷ್ಕರಿಸಲಾಗಿದೆ.

ಕನಿಷ್ಠ ವೇತನ ಕೋಷ್ಟಕ"

| | *"ವಿನೀರ್ ಉದ್ದಿಮೆಗಳಲ್ಲಿ ಉದ್ಯೋಗ"* | | | | | | | | |
|---|---|---|---|---|---|---|---|---|---|
| ಕ್ರ. ಸಂ | ಕೆಲಸದ ವರ್ಗಗಳು | ಕನಿಷ್ಠ ವೇತನ ದರಗಳು | | | | | | | |
| | | ವಲಯ-1 | | ವಲಯ-2 | | ವಲಯ-3 | | ವಲಯ-4 | |
| | | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| ಯಾರ್ಡ್ ವಿಭಾಗ: | | | | | | | | | |
| ಅ | ನಾಟಿಗಳನ್ನು ಕೊಯ್ದು ತುಂಡು ಮಾಡುವುದು | 645.85 | 16792.06 | 587.13 | 15265.51 | 533.76 | 13877.73 | 485.24 | 12616.12 |

| | | | | | | | | | |
|---|---|---|---|---|---|---|---|---|---|
| ಆ | ನಾಟೆಗಳ ತುಂಡುಗಳನ್ನು ಸಾಗಿಸುವುದು ಫೀಲಿಂಗ್ ವಿಭಾಗ: | 607.78 | 15802.32 | 552.53 | 14365.75 | 502.30 | 13059.77 | 456.64 | 11872.52 |
| | ಪೀಲಿಂಗ್ ವಿಭಾಗ: | | | | | | | | |
| ಅ | ಪೀಲಿಂಗ್ ಮೆಷಿನ್ ಆಪರೇಟರ್ | 632.67 | 16449.46 | 575.16 | 14954.05 | 522.87 | 13594.59 | 475.34 | 12358.72 |
| ಆ | ಪೀಲಿಂಗ್ ಮೆಷಿನ್ ಸಹಾಯಕ ಆಪರೇಟರ್ | 623.89 | 16221.06 | 567.17 | 14746.42 | 515.61 | 13405.83 | 468.74 | 12187.12 |
| ಇ | ಪೀಲಿಂಗ್ ಮೆಷಿನ್ ಸಹಾಯಕ | 607.78 | 15802.32 | 552.53 | 14365.75 | 502.30 | 13059.77 | 456.64 | 11872.52 |
| ಈ | ಪೀಲಿಂಗ್ ಮೆಷಿನ್ ಹೆಲ್ಪರ್ | | | | | | | | |
| ಉ | ರೀಲಿಂಗ್ ಮೆಷಿನ್ ಆಪರೇಟರ್ | | | | | | | | |
| ಊ | ರೀಲಿಂಗ್ ಮೆಷಿನ್ ಹೆಲ್ಪರ್ | | | | | | | | |
| ಋ | ಕ್ಯಾರಿಯರ್ | | | | | | | | |
| | ಡ್ರಾಯಿಂಗ್ ವಿಭಾಗ | | | | | | | | |
| ಅ | ಡ್ರಾಯರ್ ಆಪರೇಟರ್ | 645.85 | 16792.06 | 587.13 | 15265.51 | 533.76 | 13877.73 | 485.24 | 12616.12 |
| ಆ | ಡ್ರಾಯರ್ ಫೀಡಿಂಗ್ ಮನ್ | 628.28 | 16335.26 | 571.16 | 14850.23 | 519.24 | 13500.21 | 472.04 | 12272.92 |
| | ಕ್ಲೈ ಪಿಂಗ್ ವಿಭಾಗ | | | | | | | | |
| ಅ | ದಕೋರೇಟಿವ್ ಕ್ಲೈ ಪಿಂಗ್ ಆಪರೇಟರ್ | 667.81 | 17363.05 | 607.10 | 15784.60 | 551.91 | 14349.63 | 501.74 | 13045.12 |
| ಆ | ಸಹಾಯಕ ಕ್ಲೈ ಪಿಂಗ್ ಆಪರೇಟರ್ | 628.28 | 16335.26 | 571.16 | 14850.23 | 519.24 | 13500.21 | 472.04 | 12272.92 |
| ಇ | ಹೆಲ್ಪರ್ | 607.78 | 15802.32 | 552.53 | 14365.75 | 502.30 | 13059.77 | 456.64 | 11872.52 |
| | ಸಾರ್ಟಿಂಗ್ ವಿಭಾಗ | | | | | | | | |
| ಅ | ಸಾರ್ಟರ್ | 628.28 | 16335.26 | 571.16 | 14850.23 | 519.24 | 13500.21 | 472.04 | 12272.92 |
| | ಗುಲೇಟಿಂಗ್ ಕಟ್ಟರ್ | | | | | | | | |
| ಅ | ಗುಲೇಟಿಂಗ್ ಕಟ್ಟರ್ | 667.81 | 17363.05 | 607.10 | 15784.60 | 551.91 | 14349.63 | 501.74 | 13045.12 |

| | | | | | | | | | |
|---|---|---|---|---|---|---|---|---|---|
| ಆ | ಸ್ಲೀಸಿಂಗ್ ಮನ್ | 628.28 | 16335.26 | 571.16 | 14850.23 | 519.24 | 13500.21 | 472.04 | 12272.92 |
| ಇ | ಹೆಲ್ಪರ್ | 607.78 | 15802.32 | 552.53 | 14365.75 | 502.30 | 13059.77 | 456.64 | 11872.52 |
| ಬಾಯ್ಲರ್ ವಿಭಾಗ | | | | | | | | | |
| ಅ | ಸೀನಿಯರ್ ಬಾಯ್ಲರ್ ಅಟೆಂಡೆಂಟ್ | 653.17 | 16982.39 | 593.79 | 15438.54 | 539.81 | 14035.03 | 490.74 | 12759.12 |
| ಆ | ಬಾಯ್ಲರ್ ಅಟೆಂಡೆಂಟ್ | 644.38 | 16753.99 | 585.80 | 15230.90 | 532.55 | 13846.27 | 484.14 | 12587.52 |
| ಇ | ಬಾಯ್ಲರ್ ಪೈರ್ ಮೆನ್ | 628.28 | 16335.26 | 571.16 | 14850.23 | 519.24 | 13500.21 | 472.04 | 12272.92 |
| ಪ್ಲೀಚಿಂಗ್ ವಿಭಾಗ | | | | | | | | | |
| ಅ | ಬೀಂಡಸಾ ಆಪರೇಟರ್ | 653.17 | 16982.39 | 593.79 | 15438.54 | 539.81 | 14035.03 | 490.74 | 12759.12 |
| ಆ | ಸ್ಕ್ಯಾಗಿಂಗ್ ಮ್ಯಾನ್ | | | | | | | | |
| ಇ | ಸಹಾಯಕರು | 607.78 | 15802.32 | 552.53 | 14365.75 | 502.30 | 13059.77 | 456.64 | 11872.52 |
| ಈ | ಹೆಲ್ಪರ್ | | | | | | | | |
| ಉ | ಬಾಯ್ಲಿಂಗ್ ವ್ಯಾಟ್ ಅಟೆಂಡರ್ | 641.46 | 16677.86 | 583.14 | 15161.69 | 530.13 | 13783.35 | 481.94 | 12530.32 |
| ಊ | ಎಲೆಕ್ಟ್ರಿಕ್ ಹಾಯಿಸ್ಟ್ ಆಪರೇಟರ್ | | | | | | | | |
| ಸ್ಕ್ಯಾಸರ್ ವಿಭಾಗ | | | | | | | | | |
| ಅ | ಸ್ಕ್ಯಾಸರ್ ಆಪರೇಟರ್ | 676.59 | 17591.45 | 615.09 | 15992.23 | 559.17 | 14538.39 | 508.34 | 13216.72 |
| ಆ | ಸಹಾಯಕ ಸ್ಕ್ಯಾಸರ್ ಆಪರೇಟರ್ | | | | | | | | |
| E | ಬ್ಲೇಡ್ ಶಾರ್ಪರ್ | 667.81 | 17363.05 | 607.10 | 15784.60 | 551.91 | 14349.63 | 501.74 | 13045.12 |
| F | ಹೆಲ್ಪರ್ | 607.78 | 15802.32 | 552.53 | 14365.75 | 502.30 | 13059.77 | 456.64 | 11872.52 |
| ಮೆಷಿನ್ ಶಾಪ್ | | | | | | | | | |
| ಅ | ಟರ್ನರ್ | 667.81 | 17363.05 | 607.10 | 15784.60 | 551.91 | 14349.63 | 501.74 | 13045.12 |
| ಆ | ಫಿಟ್ಟರ್ | | | | | | | | |
| ಇ | ವೆಲ್ಡರ್ | | | | | | | | |
| ಈ | ಗ್ಯಾಸ್ ಕಟ್ಟಿಂಗ್ | | | | | | | | |

| | | | | | | | | | |
|---|---|---|---|---|---|---|---|---|---|
| ಉ | ಕಾರ್ಪೆಂಟರ್ | 628.28 | 16335.26 | 571.16 | 14850.23 | 519.24 | 13500.21 | 472.04 | 12272.92 |
| ಊ | ನೀರಿನ ಪಂಪ್ ಆಪರೇಟರ್ | | | | | | | | |
| ಋ | ಹೆಲ್ಪರ್ | 607.78 | 15802.32 | 552.53 | 14365.75 | 502.30 | 13059.77 | 456.64 | 11872.52 |
| ಸಿಬ್ಬಂದಿ ಮತ್ತು ಆಡಳಿತ | | | | | | | | | |
| ಅ) | ಫಾರೆಸ್ಟ್ ಸೂಪರ್ ವೈಸರ್ | 654.75 | 17023.73 | 595.24 | 15476.10 | 582.04 | 15132.92 | 547.94 | 14246.32 |
| ಆ) | ಜೂನಿಯರ್ ಫಾರೆಸ್ಟ್ ಸೂಪರ್ ವೈಸರ್ | 643.87 | 16740.59 | 585.34 | 15218.70 | 572.14 | 14875.52 | 538.04 | 13988.92 |
| ಇ) | ಸೀನಿಯರ್ ಕ್ಲರ್ಕ್: ಕ್ಲರ್ಕ್ (ಪದವೀಧರ) ಟೈಂ ಕೀಪರ್ | 632.98 | 16457.45 | 575.44 | 14961.30 | 562.24 | 14618.12 | 529.24 | 13760.12 |
| ಈ) | ಜೂನಿಯರ್ ಕ್ಲರ್ಕ್ (ಪದವೀಧರರಲ್ಲದವರು) | 613.62 | 15954.09 | 557.84 | 14503.70 | 545.74 | 14189.12 | 513.84 | 13359.72 |
| ಉ) | ಗೆಸ್ಟ್ ಹೌಸ್ ಕುಕ್ | 599.10 | 15576.57 | 544.64 | 14160.50 | 533.64 | 13874.52 | 501.74 | 13045.12 |

| ಕಛೇರಿ ಸಿಬ್ಬಂದಿಗಳು ಮತ್ತು ಚಾಲಕರು | | | | | | | | |
|---|---|---|---|---|---|---|---|---|
| ಹುದ್ದೆಗಳ ವಿವರ | ವಲಯ-1 | | ವಲಯ-2 | | ವಲಯ-3 | | ವಲಯ-4 | |
| | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ | ದಿನಕ್ಕೆ | ತಿಂಗಳಿಗೆ |
| ಮ್ಯಾನೇಜರ್, ಪರ್ಸನಲ್ ಆಫೀಸರ್ ಮಾರ್ಕೆಟಿಂಗ್ ಮ್ಯಾನೇಜರ್/ ಕಛೇರಿ ಮೇಲ್ವಿಚಾರಣೆಯ ತತ್ಸಮಾನ ಹುದ್ದೆ | 663.00 | 17238.05 | 602.73 | 15670.95 | 547.94 | 14246.32 | 493.14 | 12821.69 |
| ಅಸಿಸ್ಟೆಂಟ್ ಮ್ಯಾನೇಜರ್ ಅಸಿಸ್ಟೆಂಟ್ ಪರ್ಸನಲ್ ಮ್ಯಾನೇಜರ್, ಸೀನಿಯರ್ ಅಕೌಂಟೆಂಟ್ ಮತ್ತು ತತ್ಸಮಾನ ಹುದ್ದೆ. | 640.37 | 16649.75 | 582.16 | 15136.13 | 529.24 | 13760.12 | 476.31 | 12384.11 |
| ಹಿರಿಯ ಗುಮಾಸ್ತ, ಕ್ಯಾಷಿಯರ್, ಜಡ್ಜ್ಮೆಂಟ್ ರೈಟರ್, ಸ್ಟೆನೋಗ್ರಾಫರ್, ಸ್ಟೋರ್ ಕೀಪರ್, ರಿಸೆಪ್ಷನಿಸ್ಟ್, (ಸ್ವಾಗತಗಾರರು) ಮತ್ತು ತತ್ಸಮಾನ ಹುದ್ದೆ | 615.09 | 15992.23 | 559.17 | 14538.39 | 508.34 | 13216.72 | 457.50 | 11895.05 |

| | | | | | | | | |
|---|---|---|---|---|---|---|---|---|
| ಕಿರಿಯ ಗುಮಾಸ್ತ , ಬುಕಿಂಗ್ ಗುಮಾಸ್ತ, ಕಂಪ್ಯೂಟರ್ ಆಪರೇಟರ್, ಟೈಪಿಸ್ಟ್, ಟೆಲಿಫೋನ್ ಆಪರೇಟರ್, ಡಾಟಾ ಎಂಟ್ರೀ ಆಪರೇಟರ್ ಮತ್ತು ತತ್ಸಮಾನ ಹುದ್ದೆ. | 599.11 | 15576.96 | 544.65 | 14160.87 | 495.14 | 12873.52 | 445.62 | 11586.17 |
| ಜವಾನ, ವಾಚ್ಮನ್, ಲಿಫ್ಟ್ ಆಪರೇಟರ್, ಆಫೀಸ್ ಬಾಯ್, ಅಟೆಂಡರ್, ಹೆಲ್ಪರ್ / ಸಹಾಯಕ, ದಲಾಯತ್, ಮಜ್ದೂರ್, ಸ್ವೀಪರ್ ಮತ್ತು ತತ್ಸಮಾನ ಹುದ್ದೆ. | 552.53 | 14365.75 | 502.30 | 13059.77 | 456.64 | 11872.52 | 410.97 | 10685.27 |
| ಹೆವಿ ವೆಹಿಕಲ್ ಡ್ರೈವರ್, ಟ್ರ್ಯಾಕ್ಟರ್ ಡ್ರೈವರ್ ಬಹು ಆಕ್ಸೆಲ್ ಮತ್ತು ಘನ ವಾಹನ ಚಾಲಕರು, ಅರ್ಥ್ ಮೂವರ್ಸ್ ಚಾಲಕರು, ಕ್ರೇನ್ ಜೋಡಿಸಿದ ವಾಹನ ಚಾಲಕರು, ಟ್ರ್ಯಾಕ್ಟರ್ ಚಾಲಕರು, ರೋಡ್ ರೋಲರ್ ಮತ್ತು ರಸ್ತೆ ನಿರ್ಮಾಣ ಕಾಮಗಾರಿ ವಾಹನಗಳ ಚಾಲಕರು | 615.09 | 15992.23 | 559.17 | 14538.39 | 508.34 | 13216.72 | 457.50 | 11895.05 |
| ಕಾರ್ ಡ್ರೈವರ್ ಜೀಪ್ ಡ್ರೈವರ್ ಲಘು ವಾಹನ ಚಾಲಕರು, ಟಂ ಟಂ, ತ್ರಿಚಕ್ರ ವಾಹನ ಚಾಲಕರು | 599.11 | 15576.96 | 544.65 | 14160.87 | 495.14 | 12873.52 | 445.62 | 11586.17 |

ಮೇಲ್ಕಂಡ ಕನಿಷ್ಠ ವೇತನ ದರಗಳನ್ನು ಸರ್ಕಾರವು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ನಿಗದಿಪಡಿಸಿದ್ದು, ಈ ಎಲ್ಲಾ ಷರತ್ತುಗಳನ್ನು ಯಥಾವತ್ತಾಗಿ ಉದ್ಯೋಗದಾತರು ಪಾಲಿಸಲು ಬಾಧ್ಯಸ್ಥರಿರುತ್ತಾರೆ;

1. ವ್ಯತ್ಯಾಸವಾಗುವ ತುಟ್ಟಿಭತ್ಯೆ:-

ತುಟ್ಟಿಭತ್ಯೆ ಲೆಕ್ಕಾಚಾರವನ್ನು ವರ್ಷಕ್ಕೊಮ್ಮೆ ಮಾಡಲಾಗುತ್ತದೆ. ಹಿಂದಿನ ಕ್ಯಾಲೆಂಡರ್ ವರ್ಷದ ಹನ್ನೆರಡು (12) ತಿಂಗಳುಗಳ ಗ್ರಾಹಕ ಬೆಲೆ ಸೂಚ್ಯಾಂಕಗಳ ಸರಾಸರಿ ಆಧಾರದ ಮೇಲೆ ಏಪ್ರಿಲ್ ಮೊದಲನೇ ದಿನಾಂಕದಂದು ಪ್ರತಿ ವರ್ಷ ಲೆಕ್ಕಾಚಾರ ಮಾಡತಕ್ಕದ್ದು. ಅಲ್ಲದೇ ಗ್ರಾಹಕ ಬೆಲೆ ಸೂಚ್ಯಂಕಗಳ ಸಂಖ್ಯೆಯ ವಾರ್ಷಿಕ ಸರಾಸರಿ ಆಧಾರದ ಮೇಲೆ ಹೆಚ್ಚುವರಿಯಾದ ಅಥವಾ ಕಡಿಮೆಯಾದ ಪ್ರಮಾಣವನ್ನು ಆಧರಿಸಿ ಲೆಕ್ಕ ಹಾಕಲಾಗುತ್ತದೆ. ಆದ್ದರಿಂದ ಮೊದಲ ಲೆಕ್ಕಾಚಾರವು ಗ್ರಾಹಕ ಬೆಲೆ ಸೂಚ್ಯಾಂಕದ (ಜನವರಿ 2020 ರಿಂದ ಡಿಸೆಂಬರ್ 2020) ರ ಸರಾಸರಿ ಆಧಾರದ ಮೇಲೆ

2021 ಏಪ್ರಿಲ್ 1 ನೇ ತಾರೀಖಿನಿಂದ ಜಾರಿಗೆ ಬರುತ್ತದೆ. ಗ್ರಾಹಕ ಬೆಲೆ ಸೂಚ್ಯಾಂಕ 7616 ಅಂಶಗಳಿಗಿಂತ ಹೆಚ್ಚಾಗುವ ಪ್ರತಿ ಅಂಶಕ್ಕೆ ಎಲ್ಲಾ ವರ್ಗದ ಕಾರ್ಮಿಕರಿಗೆ ದಿನ ಒಂದಕ್ಕೆ ನಾಲ್ಕು (4) ಪೈಸೆಯಂತೆ ತುಟ್ಟಿ ಭತ್ಯೆಯನ್ನು ಪಾವತಿಸತಕ್ಕದ್ದು.

ತುಟ್ಟಿಭತ್ಯೆಯನ್ನು ಲೆಕ್ಕಾಚಾರ ಮಾಡುವ ವಿಧಾನ:-

ಅ) ಮಾಸಿಕ ವೇತನವನ್ನು ಪಡೆಯುವವರು:-

ತಿಂಗಳ ತುಟ್ಟಿಭತ್ಯೆ = ಪ್ರತಿ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಾಂಕದ ಅಂಶಗಳು (ಸಿ.ಪಿ.ಐ) x ತುಟ್ಟಿಭತ್ಯೆಯ ದರ x 30 ದಿನಗಳು

ದಿನಗೂಲಿ ಗಳಿಕೆದಾರರ ಸಂದರ್ಭದಲ್ಲಿ ಮಾಸಿಕ ವೇತನ ದರಗಳನ್ನು ಇಪ್ಪತ್ತಾರು (26) ದಿನಗಳಿಂದ ವಿಭಾಗಿಸಿ, ನಾಲ್ಕು (4) ರಜಾ ದಿನಗಳಿಗೆ ವೇತನವನ್ನು ನೀಡುವುದೂ ಸೇರಿದಂತೆ ಈ ಕೆಳಕಂಡಂತೆ ಲೆಕ್ಕ ಹಾಕತಕ್ಕದ್ದು. ಭಾಗಿಸಿದಾಗ ಬಂದ ದರವು ಭಿನ್ನಾಂಕವಾಗಿದ್ದಲ್ಲಿ ಅದನ್ನು ಸಮೀಪದ ರೂಪಾಯಿಗೆ ಪೂರ್ಣಗೊಳಿಸುವುದು.

ಆ) ದಿನಗೂಲಿ ವೇತನ ಪಡೆಯುವವರು :-

$$\text{ದಿನದ ತುಟ್ಟಿಭತ್ಯೆ} = \frac{\text{ಪ್ರತಿ ವರ್ಷ ಹೆಚ್ಚಾಗುವ ಅಂಶಗಳು} \times \text{ತುಟ್ಟಿಭತ್ಯೆಯ ದರ} \times 30 \text{ ದಿನಗಳು}}{26}$$

2. ಮಹಿಳೆಯರು, ಪುರುಷರು ಮತ್ತು ತೃತೀಯ ಲಿಂಗಿಗಳು ಒಂದೇ ರೀತಿಯ ಕೆಲಸವನ್ನು ನಿರ್ವಹಿಸಿದ ಸಂದರ್ಭಗಳಲ್ಲಿ ಎಲ್ಲರಿಗೂ ಸಮಾನ ದರದ ವೇತನಗಳನ್ನು ಸಂದಾಯ ಮಾಡತಕ್ಕದ್ದು.

3. ಅಧಿಸೂಚನೆಯಲ್ಲಿ ವರ್ಗವನ್ನು ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರೆ ವರ್ಗದ ಕಾರ್ಮಿಕರಿಗೆ ಪಾವತಿ ಮಾಡುತ್ತಿರುವ ವೇತನವನ್ನು ಸಂದಾಯ ಮಾಡತಕ್ಕದ್ದು.

4. ತುಂಡು ಆಧಾರದ ಮೇಲೆ ಕೆಲಸ ಮಾಡುವ ಕಾರ್ಮಿಕರ 8 ಗಂಟೆಗಳ ಕೆಲಸದ ವೇತನವು ಅದೇ ತರಹದ ಕೆಲಸ ಮಾಡುವ ಕಾರ್ಮಿಕರ ಒಂದು ದಿನದ ವೇತನಕ್ಕಿಂತ ಕಡಿಮೆ ಇರಕೂಡದು. ಒಂದು ದಿನದ ಕೆಲಸ ಎಂದರೆ 8 ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 8 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ವೇತನವನ್ನು ಆ ವರ್ಗದ ದಿನದ ಅಥವಾ ತಿಂಗಳ ವೇತನದ ಆಧಾರದ ಮೇಲೆ ಲೆಕ್ಕ ಹಾಕುವುದು.

5. ಸಂಸ್ಥೆಯಲ್ಲಿ ನಿಗದಿಪಡಿಸಿರುವ ವಾರದ ರಜೆ ಅಥವಾ ಹಬ್ಬದ ರಜಾ ದಿನಗಳಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಕನಿಷ್ಠ ವೇತನ ಕಾಯ್ದೆ ಮತ್ತು ನಿಯಮಗಳಿಗೆ ಒಳಪಟ್ಟು ಸಾಮಾನ್ಯ ವೇತನದ ಎರಡು ಪಟ್ಟು ವೇತನವನ್ನು ಪಾವತಿ ಮಾಡತಕ್ಕದ್ದು.

6. ಕೆಲಸಗಾರರು ದಿನದ ನಿಗದಿತ ಅವಧಿಗಿಂತ ಹೆಚ್ಚು ಸಮಯ ಕೆಲಸ ನಿರ್ವಹಿಸಿದಲ್ಲಿ ಅಂತಹ ಹೆಚ್ಚುವರಿ ಅವಧಿ ಕೆಲಸಕ್ಕೆ ಆತನ ವೇತನದ ಎರಡು ಪಟ್ಟು ವೇತನವನ್ನು ಪಾವತಿಸತಕ್ಕದ್ದು.

7. ಟ್ರೈನಿಗಳಿಗೆ ಆ ವರ್ಗದ ನೌಕರರು ಪಡೆಯುತ್ತಿರುವ ವೇತನದ ಪ್ರತಿಶತ 75 ರಷ್ಟು ವೇತನವನ್ನು ಶಿಷ್ಯ ವೇತನವನ್ನಾಗಿ ಪಾವತಿಸತಕ್ಕದ್ದು.

8. ನೌಕರರುಗಳ ವೇತನವನ್ನು ಚೆಕ್ ಮೂಲಕ ಪಾವತಿಸುವುದು ಅಥವಾ ನೌಕರರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡತಕ್ಕದ್ದು.

9. ಒಂದು ದಿನದ ಕೆಲಸ ಎಂದರೆ ಎಂಟು (8) ಗಂಟೆಗಳ ಕೆಲಸ ಎಂದು ತಿಳಿಯತಕ್ಕದ್ದು. ಕಾರ್ಮಿಕರನ್ನು 4 ಗಂಟೆಗಳಿಗಿಂತ ಕಡಿಮೆ ಅವಧಿಯ ಕೆಲಸಕ್ಕೆ ನೇಮಿಸಿಕೊಂಡರೆ ಅಂತಹ ಕಡಿಮೆ ಅವಧಿಗೆ ಅನುಗುಣವಾಗಿ ಕನಿಷ್ಠ ವೇತನವನ್ನು ಕರ್ನಾಟಕ ಕನಿಷ್ಠ ವೇತನ ನಿಯಮಗಳು, 1958ರ ನಿಯಮ 27 (4) ರನ್ವಯ ಗಂಟೆಯ ಆಧಾರದ ಮೇಲೆ ಲೆಕ್ಕ ಹಾಕುವುದು.

10. ಈ ಅಧಿಸೂಚನೆಯ ವಲಯಗಳನ್ನು ಈ ಕೆಳಕಂಡಂತೆ ವಿಂಗಡಿಸಲಾಗಿದೆ;

ವಲಯ-1: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿ ಮತ್ತು ಗೊತ್ತುಪಡಿಸಿದ ಆಗ್ಲೋಮರೇಷನ್ ಪ್ರದೇಶಗಳು

ವಲಯ-2: ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳು ಮತ್ತು ಇವುಗಳಿಗೆ ಗೊತ್ತುಪಡಿಸಿದ ಆಗ್ಲೋಮರೇಷನ್ ಪ್ರದೇಶಗಳು

ವಲಯ-3: ವಲಯ-2 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಎಲ್ಲಾ ಜಿಲ್ಲಾ ಕೇಂದ್ರಗಳು.

ವಲಯ-4: ವಲಯ-2 ಮತ್ತು 3 ರಲ್ಲಿ ನಮೂದಿಸಿರುವ ಪ್ರದೇಶಗಳನ್ನು ಹೊರತುಪಡಿಸಿ ರಾಜ್ಯದ ಇತರೆ ಭಾಗಗಳು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

A Umadevi

(ಎ. ಉಮಾದೇವಿ) 28/7/2022

ಪೀಠಾಧಿಕಾರಿ-2,

ಕಾರ್ಮಿಕ ಇಲಾಖೆ (ಕನಿಷ್ಠ ವೇತನ)

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಈ ಅಧಿಸೂಚನೆಯನ್ನು ಇ - ರಾಜ್ಯಪತ್ರದಲ್ಲಿ (E-Gazzette) ಪ್ರಕಟಿಸಲುಕೋರಲಾಗಿದೆ.

1. ಕಾರ್ಮಿಕ ಆಯುಕ್ತರು, ಕಾರ್ಮಿಕ ಭವನ, ಬನ್ನೇರುಘಟ್ಟರಸ್ತೆ, ಬೆಂಗಳೂರು-29.
2. ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ (ಕಾರ್ಮಿಕ ಆಯುಕ್ತರ ಮೂಲಕ).
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು (ಕಾರ್ಮಿಕ ಆಯುಕ್ತರ ಮೂಲಕ).
4. ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ವಾರ್ತಾ ಭವನ, ಇನ್ ಫೆಂಟ್ರಿ ರಸ್ತೆ, ಬೆಂಗಳೂರು

5. ಸದಸ್ಯ ಕಾರ್ಯದರ್ಶಿ, ಕರ್ನಾಟಕ ಕನಿಷ್ಠ ವೇತನ ಸಲಹಾ ಮಂಡಳಿ, ಕಾರ್ಮಿಕ ಆಯುಕ್ತರ ಕಛೇರಿ, ಕಾರ್ಮಿಕ ಭವನ, ಬೆಂಗಳೂರು.
6. ಎಲ್ಲಾ ಜಿಲ್ಲೆಗಳ ಕಾರ್ಮಿಕ ಅಧಿಕಾರಿಗಳಿಗೆ (ಕಾರ್ಮಿಕ ಆಯುಕ್ತರ ಮೂಲಕ)
7. ಶಾಖಾ ರಕ್ಷ ಕಡತ/ ಹೆಚ್ಚುವರಿ ಪ್ರತಿ.

ಪ್ರತಿಗಳು:

1. ಮಾನ್ಯ ಕಾರ್ಮಿಕ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಕಾಸಸೌಧ, ಬೆಂಗಳೂರು
2. ಸರ್ಕಾರದ ಕಾರ್ಯದರ್ಶಿರವರ ಆಪ್ತ ಕಾರ್ಯದರ್ಶಿ, ಕಾರ್ಮಿಕ ಇಲಾಖೆ
3. ಸರ್ಕಾರದ ಉಪ ಕಾರ್ಯದರ್ಶಿರವರ ಆಪ್ತ ಸಹಾಯಕರು, ಕಾರ್ಮಿಕ ಇಲಾಖೆ